**ದಿನಾಂಕ: 02-01-2021 ರಂದು ವಾರ್ಡ್ ಸಂಖ್ಯೆ 197 ವಸಂತಪುರ ವಾರ್ಡ್ ಕಛೇರಿಯಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡಾವಳಿಗಳು.**

***ಹಾಜರಿದ್ದ ಸಮಿತಿ ಸದಸ್ಯರು:-***

1. ಶ್ರೀ ಮಹದೇಶ್.ಹೆಚ್.ಎಸ್– ವಾರ್ಡ್ ಸಮಿತಿ ಅಧ್ಯಕ್ಷರು ಹಾಗೂ ಕಾರ್ಯಪಾಲಕ ಅಭಿಯಂತರರು ರಸ್ತೆ ಮತ್ತು ಮೂಲಭೂತ ಸೌಕರ್ಯ ವಿಭಾಗ ಬೊಮ್ಮನಹಳ್ಳಿ ವಲಯ
2. ಶ್ರೀ ಜಗದೀಶ್ ರಾವ್ ವಾಡೆ–ಸದಸ್ಯರು
3. ಶ್ರೀ ಎನ್.ಆರ್.ಸೋಮಶೇಖರ್ –ಸದಸ್ಯರು
4. ಶ್ರೀ ಮಹಾಬಲೇಶ್ವರ್–ಸದಸ್ಯರು
5. ಶ್ರೀ ಬಿ.ಎಸ್.ರಾಜೇಶ್–ಸದಸ್ಯರು
6. ಶ್ರೀ ಮಂಜುನಾಥ್ ರೆಡ್ಡಿ–ಸದಸ್ಯರು
7. ಶ್ರೀ ರಘು.ಬಿ.ವಿ
8. ಶ್ರೀ ಎಂ.ಎನ್.ಗೋಪಾಲಕೃಷ್ಣ

***ಹಾಜರಿದ್ದ ಅಧಿಕಾರಿಗಳು:-***

1. ಶ್ರೀ ನರೇಂದ್ರ ಕುಮಾರ್.ಎ – ಸಹಾಯಕ ಅಭಿಯಂತರರು ಮತ್ತು ಸಂಚಾಲಕರು (ವಾರ್ಡ್ 197 ವಸಂತಪುರ)
2. ಶ್ರೀ ಮಹೇಶ್ – ಕಿರಿಯ ಆರೋಗ್ಯ ಪರಿವೀಕ್ಷಕರು (ವಾರ್ಡ್ 197 ವಸಂತಪುರ)
3. ಶ್ರೀಮತಿ ಪ್ರೀತಿ.ಜೆ – ಸಹಾಯಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ ಇಲಾಖೆ
4. ಶ್ರೀ ವಿನಯ್ ಕುಮಾರ್ – ಸಹಾಯಕ ಅಭಿಯಂತರರು, ಬೆಸ್ಕಾಂ ಇಲಾಖೆ
5. ಶ್ರೀ ನವೀನ್ ಕುಮಾರ್.ಕೆ – ಪರಿವೀಕ್ಷಕರು, ಬಿ.ಡಬ್ಲ್ಯೂ.ಎಸ್.ಎಸ್.ಬಿ ಇಲಾಖೆ
6. ಡಾ// ಪಲ್ಲವಿ – ಮೆಡಿಕಲ್ ಆಫೀಸರ್, ವಸಂತಪುರ ಪಿ.ಹೆಚ್.ಸಿ

ಮೇಲೆ ಹಾಜರಿದ್ದ ಸಮಿತಿ ಸದಸ್ಯರ ಹಾಗೂ ಅಧಿಕಾರಿಗಳ ಸಮ್ಮುಖದಲ್ಲಿ ವಾರ್ಡ್ ಸಮಿತಿ ಅಧ್ಯಕ್ಷರಾದ ಶ್ರೀ ಮಹದೇಶ್.ಹೆಚ್.ಎಸ್ ಕಾರ್ಯಪಾಲಕ ಅಭಿಯಂತರರು ರಸ್ತೆ ಮತ್ತು ಮೂಲಭೂತ ಸೌಕರ್ಯ ವಿಭಾಗ ರವರು ಸಭೆಯನ್ನುದ್ದೇಶಿಸಿ ಮಾತನಾಡುತ್ತಾ, ಸಭೆ ಸೇರಿರುವ ಉದ್ದೇಶ ಮತ್ತು ಸಭೆಯ ಮಹತ್ವವನ್ನು, ಸದಸ್ಯರ ಮುಖ ಪರಿಚಯದೊಂದಿಗೆ ವಿವರಿಸುತ್ತಾ, ಹಾಜರಿದ್ದ ಸದಸ್ಯರಿಗೆ ಹಾಗೂ ಅಧಿಕಾರಿಗಳಿಗೆ ಸ್ವಾಗತ ಕೋರಿದರು.

ಸದರಿ ಸಭೆಯಲ್ಲಿ ಈ ಕೆಳಕಂಡಂತೆ ವಿವಿಧ ವಿಷಯಗಳ ಬಗ್ಗೆ ವಾರ್ಡ್ ಸಮಿತಿಯು ವಿವರವಾಗಿ ಚರ್ಚಿಸಿದಂತೆ ಮುಂದಿನ ಕ್ರಮ ಕೈಗೊಳ್ಳಲು ಸಂಬಂಧಪಟ್ಟ ಅಧಿಕಾರಿ / ಇಲಾಖೆಗಳಿಗೆ ಸೂಚಿಸಲಾಗಿರುತ್ತದೆ.

1. ***ಬೆಂಗಳೂರು ನೀರು ಮತ್ತು ಒಳಚರಂಡಿ ಇಲಾಖೆಗೆ ಸಂಬಂಧಪಟ್ಟಂತೆ***
   - ನಾರಾಯಣನಗರ 1ನೇ ಬ್ಲಾಕ್‌ನಲ್ಲಿ ಮ್ಯಾನ್‌ಹೋಲ್ ಕವರ್‌ಗಳನ್ನು ಅಳವಡಿಸುವ ಕಾಮಗಾರಿಯು ಪ್ರಗತಿಯಲ್ಲಿದ್ದು, ಇದನ್ನು ಶೀಘ್ರವಾಗಿ ಪೂರ್ಣಗೊಳಿಸಲು ಕೋರಿರುತ್ತಾರೆ. ಮ್ಯಾನ್‌ಹೋಲ್‌ನಿಂದ ಸ್ಯಾನಿಟರಿ ನೀರು ಕ್ರಿಸ್ಟಲ್ ಡೋಲಮೈಟ್ ವಸತಿ ಸಮ್ಮುಚ್ಚಯದ ಬಳಿ ಹಾಗೂ 5ನೇ ಅಡ್ಡರಸ್ತೆ 7ನೇ ಮುಖ್ಯರಸ್ತೆ ಸಂಪತ್ತು ಕಟ್ಟಡದ ಬಳಿ ಹೊರ ಹರಿಯುತ್ತಿದ್ದು, ಇದನ್ನು ತಡೆಗಟ್ಟಲು ಕೋರಿರುತ್ತಾರೆ.
   - ನಾರಾಯಣನಗರ 3ನೇ ಹಂತದ 7ನೇ ಮುಖ್ಯರಸ್ತೆಯಲ್ಲಿ ಪದೆಪದೇ ಒಳಚರಂಡಿ ನೀರು ರಸ್ತೆಗೆ ಹರಿಯುತ್ತಿದ್ದು, ಇದನ್ನು ತಡೆಗಟ್ಟಲು 7ನೇ ಮುಖ್ಯರಸ್ತೆಯಲ್ಲಿನ ಸ್ಯಾನಿಟರಿ ಪೈಪುಗಳನ್ನು ಬದಲಾಯಿಸಲು ಕೋರಿರುತ್ತಾರೆ.

Scanned with CamScanner

- ನಾರಾಯಣನಗರ 1ನೇ ಹಂತಕ್ಕೆ ಹೊಂದಿಕೊಂಡಂತಿರುವ ಬಿ.ಸಿ.ಎಂ.ಸಿ ಬಡಾವಣೆ ಹಾಗೂ ಬಾಗೇಗೌಡ ಬಡಾವಣೆಗಳಿಂದ ಒಳಚರಂಡಿಯನ್ನು ರಾಜಕಾಲುವೆಗೆ ಬಿಡುತ್ತಿದ್ದು, ಇದರಿಂದ ದುರ್ವಾಸನೆ ಹಾಗೂ ಸೊಳ್ಳೆಗಳಿಂದ ಸಾರ್ವಜನಿಕರಿಗೆ ಅನಾನುಕೂಲವಾಗಿರುತ್ತದೆ ಎಂದು ತಿಳಿಸಿರುತ್ತಾರೆ.
- 110 ಹಳ್ಳಿಗಳ ಪ್ರದೇಶದಲ್ಲಿ ಪ್ರಸ್ತುತ ವಾರಕ್ಕೊಂದು ಬಾರಿ ಮಾತ್ರ ಕುಡಿಯುವ ನೀರನ್ನು ಸರಬರಾಜು ಮಾಡುವಂತೆ ಅನುಮೋದನೆಗೊಂಡಿದ್ದರು ನಾರಾಯಣನಗರ 1ನೇ, 3ನೇ ಹಂತದಲ್ಲಿ ವಾರಕ್ಕೆ ಎರಡು ಬಾರಿ ಮತ್ತು ಸಿಂಗಾಪುರ ಗಾರ್ಡ್‌ನ್ ಬಡಾವಣೆಯಲ್ಲಿ ವಾರಕ್ಕೆ ಒಂದು ಬಾರಿ ಕುಡಿಯುವ ನೀರು ಸರಬರಾಜು ಮಾಡಲಾಗುತ್ತಿದೆ ಎಂದು ಬಿ.ಡಬ್ಲ್ಯೂ.ಎಸ್.ಎಸ್.ಬಿ ಸಹಾಯಕ ಅಭಿಯಂತರರು ತಿಳಿಸಿರುತ್ತಾರೆ.

  ಈ ಬಗ್ಗೆ ಮೇಲಿನ ಎಲ್ಲಾ ಅಂಶಗಳಿಗೆ ಕ್ರಮ ಕೈಗೊಳ್ಳಲು ಮಾನ್ಯ ನೋಡಲ್ ಅಧಿಕಾರಿ ರವರು ಸಂಬಂಧಪಟ್ಟ ಸಹಾಯಕ ಕಾರ್ಯಪಾಲಕ ಅಭಿಯಂತರರು ಬೆಂಗಳೂರು ಕುಡಿಯುವ ನೀರು ಮತ್ತು ಒಳಚರಂಡಿ ಮಂಡಳಿ ರವರಿಗೆ ಸೂಚಿಸಿರುತ್ತಾರೆ.

2. **<u>ಕೋವಿಡ್-19 ಗೆ ಸಂಬಂಧಪಟ್ಟಂತೆ</u>**

ಕೋವಿಡ್-19 ರ ಬಗ್ಗೆ ಡಾ// ಪಲ್ಲವಿ ರವರು ಮಾತನಾಡುತ್ತಾ,

- 25-ನವೆಂಬರ್-2020 ರಿಂದ 21-ಡಿಸೆಂಬರ್-2020 ವರೆಗೆ ಯುನೈಟೆಡ್ ಕಿಂಗ್‌ಡಮ್ ದೇಶದಿಂದ ನೇರವಾಗಿ ಅಥವಾ ಯುನೈಟೆಡ್ ಕಿಂಗ್‌ಡಮ್ ದೇಶದ ಮೂಲಕ ಬಂದಂತಹ ಪ್ರಯಾಣಿಕರ ಬಗ್ಗೆ ಮಾಹಿತಿಯನ್ನು ನೀಡಲು ಹಾಗೂ ಸದರಿ ಪ್ರಯಾಣಿಕರು ಪಿ.ಹೆಚ್.ಸಿ ಯಲ್ಲಿ ಕೋವಿಡ್ ಪರೀಕ್ಷೆ ಕಡ್ಡಾಯವಾಗಿ ಮಾಡಿಸಿಕೊಳ್ಳಲು ವಿವಿಧ ಬಡಾವಣೆಯ ಕ್ಷೇಮಾಭಿವೃದ್ಧಿ ಸಂಘಗಳು ಮಾಹಿತಿ ನೀಡಲು ಕೋರಿರುತ್ತಾರೆ.
- ಇನ್ನು ಕೆಲವು ದಿನಗಳಲ್ಲಿ ಕೋವಿಡ್ ವ್ಯಾಕ್ಸಿನ್ ಅನ್ನು ಆರೋಗ್ಯ ಇಲಾಖೆಯ ಸಿಬ್ಬಂದಿಗಳಿಗೆ ಹಾಗೂ ಇತರೆ ಸಿಬ್ಬಂದಿಗಳಿಗೆ ನೀಡಲಾಗುವುದು.
- ವಸಂತಪುರ ವಾರ್ಡ್‌ಅನ್ನು 3 ಭಾಗಗಳಾಗಿ (ದೊಡ್ಡಕಲ್ಲಸಂದ್ರ, ವಸಂತಪುರ, ಚಿಕ್ಕಲಸಂದ್ರ) ವಿಂಗಡಿಸಿ ವ್ಯಾಕ್ಸಿನ್ ಅನ್ನು ನೀಡಲಾಗುವುದು.
- ವಾರ್ಡ್ ವ್ಯಾಪ್ತಿಯಲ್ಲಿ ವ್ಯಾಕ್ಸಿನೇಷನ್ ಸೆಂಟರ್‌ಗಳನ್ನು ತೆರೆಯಬೇಕಾಗಿದ್ದು, ಬಡಾವಣೆಯ ಕ್ಷೇಮಾಭಿವೃದ್ಧಿ ಸಂಘದ ಕಟ್ಟಡಗಳಲ್ಲಿ ವ್ಯಾಕ್ಸಿನೇಷನ್ ಮಾಡಲು ಅವಕಾಶ ನೀಡಬೇಕಾಗಿ ಕೋರಿರುತ್ತಾರೆ.

3. **<u>ಘನತ್ಯಾಜ್ಯ ವಿಲೇವಾರಿ ಮತ್ತು ನಿರ್ವಹಣೆಗೆ ಸಂಬಂಧಪಟ್ಟಂತೆ</u>**

- ನಾರಾಯಣನಗರ 3ನೇ ಹಂತದಲ್ಲಿ ಪ್ರಾಣಿಗಳ ತ್ಯಾಜ್ಯವನ್ನು ರಸ್ತೆಯಲ್ಲಿ ಬಿಸಾಡುತ್ತಿದ್ದು, ಸಾರ್ವಜನಿಕರಿಗೆ ತೊಂದರೆಯಾಗುತ್ತಿರುತ್ತದೆ.
- ನಾರಾಯಣನಗರ 1ನೇ ಮತ್ತು 3ನೇ ಹಂತದಲ್ಲಿ ಬ್ಲಾಕ್‌ಸ್ಪಾಟ್‌ಗಳು ಹೆಚ್ಚಾಗಿದ್ದು, ಇದನ್ನು ತೆರವುಗೊಳಿಸಲು ಕೋರಿರುತ್ತಾರೆ.
- ಪ್ರತಿದಿನ ಹಸಿ ತ್ಯಾಜ್ಯವನ್ನು ಸಂಗ್ರಹಣೆ ಮಾಡದೇ ವಾರದಲ್ಲಿ 3 ದಿನ ಮಾತ್ರ ಆಟೋಗಳು ಘನತ್ಯಾಜ್ಯವನ್ನು ಸಂಗ್ರಹ ಮಾಡಿರುತ್ತಾರೆ ಎಂದು ದೂರಿರುತ್ತಾರೆ.
- ಒಣತ್ಯಾಜ್ಯವನ್ನು ಸಂಗ್ರಹಿಸುವ ದಿನಗಳನ್ನು ಬದಲಾಯಿಸದೇ ನಿರಂತರ ದಿನಗಳಂದು ಸಂಗ್ರಹಿಸಲು ಕೋರಿರುತ್ತಾರೆ.
- ದೊಡ್ಡಕಲ್ಲಸಂದ್ರದ ಅಯ್ಯಪ್ಪನಗರದಲ್ಲಿ ಘನತ್ಯಾಜ್ಯ ಸಂಗ್ರಹಿಸದ ಕಾರಣ ಅಲ್ಲಿನ ನಿವಾಸಿಗಳು ತ್ಯಾಜ್ಯವನ್ನು ನಾರಾಯಣನಗರ 3ನೇ ಹಂತದಲ್ಲಿ ಬಿಸಾಡುತ್ತಿರುತ್ತಾರೆ ಎಂದು ದೂರಿರುತ್ತಾರೆ.

  ಈ ಮೇಲಿನ ಎಲ್ಲಾ ಅಂಶಗಳಿಗೆ ಕ್ರಮ ಕೈಗೊಳ್ಳಲು ಮಾನ್ಯ ನೋಡಲ್ ಅಧಿಕಾರಿ ರವರು ಸಹಾಯಕ ಕಾರ್ಯಪಾಲಕ ಅಭಿಯಂತರರು ಘನತ್ಯಾಜ್ಯ ಹಾಗೂ ಆರೋಗ್ಯ ಪರಿವೀಕ್ಷಕರು ಘನತ್ಯಾಜ್ಯ ವಿಲೇವಾರಿ ಮತ್ತು ನಿರ್ವಹಣೆ ರವರಿಗೆ ಸೂಚಿಸಿರುತ್ತಾರೆ.

Scanned with CamScanner

4. **ಬೆಸ್ಕಾಂ ಇಲಾಖೆಗೆ ಸಂಬಂಧಪಟ್ಟಂತೆ.**

- ಮಾರುತಿ ಬಡಾವಣೆ ಹಾಗೂ ನಾರಾಯಣನಗರ 3ನೇ ಹಂತದಲ್ಲಿ ಬೆಸ್ಕಾಂ ಇಲಾಖೆಯಿಂದ ಕೇಬಲ್ ಅಳವಡಿಸಲು ಅಗೆದಿರುವ ರಸ್ತೆಗಳನ್ನು ಪ್ಯಾಚ್ ವರ್ಕ್ ಮಾಡಲು ಕೋರಿರುತ್ತಾರೆ.
- ಗುಬ್ಬಲಾಳದ ಸಿಂಗಾಪುರ ಗಾರ್ಡನ್ 1ನೇ ಮತ್ತು 2ನೇ ಹಂತದಲ್ಲಿ ಹಳೆಯ ಟ್ರಾನ್ಸ್‌ಫರ್‌ಗಳನ್ನು ಸ್ಪನ್ / ಸಿಂಗಲ್ ಪೋಲ್ ಟ್ರಾನ್ಸ್‌ಫರ್‌ಗಳಾಗಿ ಉನ್ನತಿಕರಿಸಲು ಕೋರಿರುತ್ತಾರೆ.
- ನಾರಾಯಣ 1ನೇ ಹಂತದಲ್ಲಿನ ಟ್ರಾನ್ಸ್‌ಫರ್‌ಗಳ ಮೇಲೆ ಗಿಡಗಂಟೆಗಳು ಬೆಳೆದಿದ್ದು, ಇದನ್ನು ತೆರವುಗೊಳಿಸಲು ಕೋರಿರುತ್ತಾರೆ.
- **ಬಿಕಾಸಿಪುರ ಪಾಲಿಕೆಯ ಚಿಣ್ಣರ ಅಂಗಳದಲ್ಲಿ ಅತ್ಯಧಿಕ ಮಕ್ಕಳು ಓಡಾಡುತ್ತಿದ್ದು, ಆದರೆ ಸದರಿ ಚಿಣ್ಣರ ಅಂಗಳದ ಮುಂಭಾಗದಲ್ಲಿ ಹಳೆಯ ಟ್ರಾನ್ಸ್‌ಫರ್ ಇದ್ದು, ಇದನ್ನು ಚಿಕ್ಕ ಮಕ್ಕಳು ಹಾಗೂ ಸಾರ್ವಜನಿಕರು ಕೈತಪ್ಪಿನ್ನಿಂದ ಅನಾಹುತವಾಗುವ ಸಂಭವ ಇರುತ್ತದೆ ಎಂದು ಹಾಗೂ ಸದರಿ ಹಳೆಯ ಟ್ರಾನ್ಸ್‌ಫರ್‌ಅನ್ನು ಕೂಡಲೇ ಸ್ಪನ್ / ಸಿಂಗಲ್ ಪೋಲ್ ಟ್ರಾನ್ಸ್‌ಫರ್‌ಗಳಾಗಿ ಉನ್ನತಿಕರಿಸಲು ಕೋರಿರುತ್ತಾರೆ.**
- ಗುಬ್ಬಲಾಳ ಸಿಂಗಾಪುರ ಗಾರ್ಡನ್‌ನಲ್ಲಿ ಅತ್ಯಧಿಕ ವಿದ್ಯುತ್ ವ್ಯತ್ಯಯವಾಗುತ್ತಿದ್ದು, ಈಗಾಗಲೇ ಸದರಿ ಬಡಾವಣೆಯ ಫೀಡರ್‌ಗಳನ್ನು ಉನ್ನತಿಕರಣಗೊಳಿಸಲಾಗಿರುತ್ತದೆ ಹಾಗೂ ಇನ್ನು ಮುಂದೆ ವಿದ್ಯುತ್ ವ್ಯತ್ಯಯವಾಗುವುದಿಲ್ಲವೆಂದು ಸಹಾಯಕ ಅಭಿಯಂತರರು ಬೆಸ್ಕಾಂ ಇಲಾಖೆಯವರು ತಿಳಿಸಿರುತ್ತಾರೆ.

ಈ ಮೇಲಿನ ಎಲ್ಲಾ ಅಂಶಗಳಿಗೆ ಕ್ರಮ ಕೈಗೊಳ್ಳಲು ಮಾನ್ಯ ನೋಡಲ್ ಅಧಿಕಾರಿ ರವರು ಸಂಬಂಧಪಟ್ಟ ಸಹಾಯಕ ಕಾರ್ಯಪಾಲಕ ಅಭಿಯಂತರರು ಬೆಸ್ಕಾಂ ಇಲಾಖೆ ರವರಿಗೆ ಸೂಚಿಸಿರುತ್ತಾರೆ.

5. **ಇತರೆ ವಿಷಯಗಳಿಗೆ ಸಂಬಂಧಪಟ್ಟಂತೆ**

- ದೊಡ್ಡಕಲ್ಲಸಂದ್ರ ಕೆರೆಯ ಅಭಿವೃದ್ಧಿ ಕೈಗೊಳ್ಳುತ್ತಿದ್ದು, ಸದರಿ ಕೆರೆಗೆ ಸೌದಾಮಿನಿ ಬಡಾವಣೆ ಮತ್ತು ಮೇಲ್ಭಾಗದ ಬಡಾವಣೆಗಳಿಂದ ಬರುವ ಕಲುಷಿತ ನೀರು ಕೆರೆಯ ಒಳಗಡೆ ಹೋಗದಂತೆ ರಾಜಕಾಲುವೆಯನ್ನು ನಿರ್ಮಿಸಬೇಕಾಗಿ ಕೋರಿರುತ್ತಾರೆ. ಈ ಬಗ್ಗೆ ಕ್ರಮ ಕೈಗೊಳ್ಳಲು ಕಾರ್ಯಪಾಲಕ ಅಭಿಯಂತರರು ಬೃಹತ್ ಮಳೆ ನೀರು ಗಾಲುವೆ ಬೊಮ್ಮನಹಳ್ಳಿ ವಲಯ ರವರಿಗೆ ಮಾನ್ಯ ನೋಡಲ್ ಅಧಿಕಾರಿ ರವರು ಸೂಚಿಸಿರುತ್ತಾರೆ.
- ವಾರ್ಡ್ ವ್ಯಾಪ್ತಿಯಲ್ಲಿ ಬೀದಿ ನಾಯಿಗಳ ಹಾವಳಿಯನ್ನು ತಪ್ಪಿಸಲು ಕ್ರಮ ಕೈಗೊಳ್ಳಲು ಕೋರಿರುತ್ತಾರೆ. ಈ ಬಗ್ಗೆ ಕ್ರಮ ಕೈಗೊಳ್ಳಲು ಪಶುಸಂಗೋಪನಾಧಿಕಾರಿಗಳು ಬೊಮ್ಮನಹಳ್ಳಿ ವಲಯ ರವರಿಗೆ ಮಾನ್ಯ ನೋಡಲ್ ಅಧಿಕಾರಿ ರವರು ಸೂಚಿಸಿರುತ್ತಾರೆ.

ಈ ಎಲ್ಲಾ ವಿಷಯದ ಬಗ್ಗೆ ಚರ್ಚಿಸಲಾಗಿ ಸೂಕ್ತ ಕ್ರಮ ಕೈಗೊಳ್ಳುವ ನಿರೀಕ್ಷಣೆಯೊಂದಿಗೆ ಸಮಿತಿಯ ಅಧ್ಯಕ್ಷರಾದ ಶ್ರೀ ಮಹದೇಶ್.ಹೆಚ್.ಎಸ್ ರವರು ಎಲ್ಲರಿಗೂ ವಂದನೆಗಳನ್ನು ಕೋರುತ್ತಾ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಶ್ರೀ ಮಹದೇಶ್.ಹೆಚ್.ಎಸ್
ಅಧ್ಯಕ್ಷರು ಹಾಗೂ ಕಾರ್ಯಪಾಲಕ ಅಭಿಯಂತರರು
ರಸ್ತೆ ಮತ್ತು ಮೂಲಭೂತ ಸೌಕರ್ಯ ವಿಭಾಗ
ಬೊಮ್ಮನಹಳ್ಳಿ ವಲಯ

ಶ್ರೀ ನರೇಂದ್ರ ಕುಮಾರ್.ಎ
ಸಂಚಾಲಕರು ಹಾಗೂ ಸ.ಅ-197

**ಪ್ರತಿಯನ್ನು:-**

1. ಜಂಟಿ ಆಯುಕ್ತರು ಬೊಮ್ಮನಹಳ್ಳಿ ವಲಯ ರವರ ಅವಗಾಹನೆಗೆ ಸಲ್ಲಿಸಿದೆ.
2. ಮುಖ್ಯ ಅಭಿಯಂತರರು ಬೊಮ್ಮನಹಳ್ಳಿ ವಲಯ ರವರ ಅವಗಾಹನೆಗೆ ಸಲ್ಲಿಸಿದೆ.
3. ಕಾರ್ಯಪಾಲಕ ಅಭಿಯಂತರರು ಬೆಂಗಳೂರು-ದಕ್ಷಿಣ ವಿಭಾಗ ರವರ ಅವಗಾಹನೆಗೆ ಸಲ್ಲಿಸಿದೆ.

Scanned with CamScanner